



ಕಣಿವೆ–ಕಂದರಕ್ಕೆ ಎಸೆಯುವ ನಕಲಿ ಚಾರಣಿಗರ ಸಂಖ್ಯೆ ದೊಡ್ಡದಿದೆ. ಇತ್ತೀಚೆಗೆ ಕೆಲವು ಗಿರಿ, ಕಣಿವೆ, ಜಲಪಾತಗಳಲ್ಲಿ ಪ್ಲಾಸ್ಟಿಕ್, ತ್ಯಾಜ್ಯಗಳೇ ತುಂಬಿ ನದಿಗಳ ಹರಿವಿಗೆ, ವನ್ಯಜೀವಿಗಳ ಬದುಕಿಗೆ ತೊಂದರೆಯಾಗುತ್ತಿದೆ. ರಾತ್ರಿ ಅಡುಗೆಗೆಂದು ಹಚ್ಚಿದ ಬೆಂಕಿಯನ್ನು ಸರಿಯಾಗಿ ನಂದಿಸದೇ ಕಾಡ್ಗಿಚ್ಚು ಹಬ್ಬಿದ ಉದಾಹರಣೆಗಳೂ ಇವೆ.

## ಈ ಸಮಯ ಗಿರಿಶೃಂಗಮಯ

ಮಳೆಗಾಲದ ಚಾತುರ್ಮಾಸ ಕೊನೆಯಾಗಿರುವ ಪ್ರಸಕ್ತ ಸಂದರ್ಭ, ಇಳೆಯು ವರ್ಷಋತುವಿನ ಅಪ್ಪುಗೆಯಿಂದ ಸಡಿಲವಾಗುತ್ತಿದೆ. ಬೆಟ್ಟದ ಬಾಗಿಲು ಹಸಿರು ತೋರಣದಿಂದ ಕಂಗೊಳಿಸುತ್ತಿದೆ. ರೈತರ ನೇಗಿಲು ಗದ್ದೆಯ ಉದ್ದಗಲದ ಲೆಕ್ಕ ಮುಗಿಸಿ ಹಸುರಿನ ಹಾಸಿಗೆ ಹಾಸಿದೆ. ಕೆರೆ, ಹೊಳೆ ಜಲಪಾತಗಳು ಮೈತುಂಬಿ ಬಸಿರಾಗಿವೆ. ಹಬ್ಬಿದಾ ಮೇಲೆ ಮದ್ಯದೊಳಗೆ ಅಬ್ಬರಿಸುವ ಅಬ್ಬಿಗಳದ್ದು ಮುಗಿಯದ ಗರ್ಜನೆ. ನೀಲಾಗಸದ ಬೆಳ್ಮುಗಿಲುಗಳಿಗೆ ಹಸಿರು ಗಿರಿಯನ್ನು ಚುಂಬಿಸುವುದೇ ದಿನಚರಿಯಾಗಿಬಿಟ್ಟಿದೆ. ಮುಂಜಾನೆಯ ಮಂಜಿನ ತೆರೆಗೂ ಶಿಖರಗಳಿಗೂ ಮಸುಕು–ಮುಸುಕಿನ ಗುದ್ದಾಟವಾಗುತ್ತಾ ಇಬ್ಬನಿ ದಿಬ್ಬಣ ಸಾಗುತ್ತಿರುತ್ತದೆ. ಕಾನನ ಕಣಿವೆಯಲ್ಲಿ ಹಕ್ಕಿ, ಮುಸುವಗಳ ಕೂಗು ರಾಗಧಾರೆಯನ್ನು ಅರ್ಪಿಸುತ್ತಿರುತ್ತದೆ.

ಕಡುನೀಲ ಬಾನಲ್ಲಿ ಬಿಳಿಮುಗಿಲ ರಾಶಿ ಹಸಿರು ಗಿರಿಯನ್ನು ಅಪ್ಪಿಕೊಂಡಾಗ ಕಣ್ಮನಗಳು ಆ ಕಡೆ ಸೆಳೆಯದಿರುವುದೇ? ಮನವ ತಣಿಸದಿರುವುದೇ? ಇನ್ನೇಕೆ ತಡ, ಹೊರಡಿ ಚಾರಣಕ್ಕೆ.

ಪಶ್ಚಿಮಘಟ್ಟವೆಂಬ ನಿಸರ್ಗ ನಿರ್ಮಿತ ಆರ್ಟ್‌ಗ್ಯಾಲರಿಯಲ್ಲಿ ಬೆಟ್ಟ, ಕಾನನವೆಂಬ ಹಚ್ಚಹಸುರಿನ ಕಲಾಕೃತಿ ಚಾರಣಿಗರನ್ನು ಆಕರ್ಷಿಸುತ್ತಿದೆ. ಮೂಲೆ ಸೇರಿದ್ದ ಚಾರಣಿಗರ ಬೆನ್ನಿನ ಡುಬ್ಬ ಮತ್ತೆ ಬೆಟ್ಟ ಏರಲು ಅಣಿಯಾಗುತ್ತಿದೆ. ಹವ್ಯಾಸಿ ಮತ್ತು ನಿಸರ್ಗಾರಾಧಕ ಚಾರಣಿಗರು ಗಿರಿಯೇರಿ ಗುರಿ ಮುಟ್ಟಲು ಮುಹೂರ್ತ ಹುಡುಕುತ್ತಿದ್ದಾರೆ. ಶಿಖರ ಕಣಿವೆಗಳ ಸೌಂದರ್ಯದ ನಿಖರ ರೂಪವನ್ನು ನೋಡಲು ಇದು ಸೂಕ್ತ ಸಮಯ. ಗಿರಿಗಳ ಶೃಂಗಭಾಗದಲ್ಲಿ ಮೋಡಗಳೊಂದಿಗೆ ದಟ್ಟಡವಿಯಲ್ಲಿ ಮರ, ಗಿಡ, ಜಲನಾಡಿಗಳೊಂದಿಗೆ ಸಂಭಾಷಿಸುವುದಕ್ಕೆ ಭಂಗವಾಗದು. ನಮಗರಿವಿಲ್ಲದಂತೆ ಮೇಘರಾಶಿ ನಮ್ಮನ್ನು ಆಲಿಂಗಿಸಿಕೊಂಡು ಇರುತ್ತವೆ.

ಬೆನ್ನಿಗೊಂದು ಡುಬ್ಬವನ್ನು ಏರಿಸಿ, ಶಿಖರದ ತುದಿಯನ್ನು ಶೋಧಿಸಿ ಕಣಿವೆ–ಕಾನನವನ್ನು ಭೇದಿಸಿ, ಗುರಿ ಮುಟ್ಟುವ ಛಲವನ್ನು ಸಾಧಿಸಿ, ಪರ್ವತಾರೋಹಣಕ್ಕೆ ಹೊರಟರೆ ಪಶ್ಚಿಮಘಟ್ಟದಲ್ಲಿ ಶಿಖರದ ಆಯ್ಕೆಮಾಡಲು ಹೆಚ್ಚು ತಲೆಕೆಡಿಸಿಕೊಳ್ಳಬೇಕಿಲ್ಲ. ಮಡಿಕೇರಿಯಿಂದ ಬೆಳಗಾವಿಯ ಖಾನಾಪುರದವರೆಗೆ, ಹಸುರಿನ ಗಿರಿಗಳ ಸಾಲೇ ಕರುನಾಡಿನ ಕೊರಳಿಗೆ ಮಾಲೆ.

ಬೆಟ್ಟದ ಶಿರಭಾಗದಲ್ಲಿರುವಾಗ ಮಳೆ ಸುರಿಯಿತೆಂದಿಟ್ಟುಕೊಳ್ಳಿ, ನಿರಾಸೆಯಾಗಬೇಕಾದದ್ದೇನಿಲ್ಲ. ಮಳೆಗೆ ಘಾಟಿಯ ಪರ್ವತ ಸಮೂಹ, ಗಳಿಗೆ ಗಳಿಗೆಗೂ ಬದಲಾಗುತ್ತಿರುವ ದೃಶ್ಯ ಅಪೂರ್ವ ಅನುಭವ ನೀಡಬಲ್ಲದು. ಆವರೆಗೆ ಸ್ಪಷ್ಟವಾಗಿ ಕಾಣುತ್ತಿದ್ದ ದೃಶ್ಯ ಹಠಾತ್ ಮಂಜು ತುಂಬಿ ಮರೆಯಾಗುತ್ತದೆ. ನಾವೆಲ್ಲೋ ಬಾನಿನಲ್ಲಿ ತೇಲಾಡುವಂತೆ ಭಾಸವಾಗುತ್ತದೆ. ಕೂಡಲೇ ಗಾಳಿ ಬೀಸಿಬರುತ್ತದೆ. ಕಲಾವಿದ ಕ್ಯಾನ್ವಾಸ್ ಮೇಲೆ ಬಣ್ಣಗಳಿಂದ ಕುಂಚವನ್ನೆಳೆದಂತೆ ಮರೆಯಾದ ದೃಶ್ಯವೆಲ್ಲಾ ಮತ್ತೆ ಮೂರ್ತರೂಪದೊಂದಿಗೆ ಕಾಣಿಸಲಾರಂಭಿಸುತ್ತದೆ.

ಪ್ರಕೃತಿಯೇ ಇಲ್ಲಿ ಒಂದು ಕಲಾಕೃತಿಯಾಗುತ್ತಿದೆ. ಮೋಡ, ಮಂಜು, ಗಾಳಿಯು ಕುಂಚದ ಮತ್ತು ಶಿಖರಗಳು ಕ್ಯಾನ್ವಾಸ್‌ನ ಪಾತ್ರಧಾರಿಯಾಗಿರುತ್ತದೆ. ಬಾನನ್ನೇ ಚುಚ್ಚಿನಿಂತ, ಕೆಲವೆಡೆ ಬಾನನ್ನೇ ಎತ್ತಿನಿಂತಂತೆ ಕಾಣುವ ಗಿರಿಸಾಲು. ಬಾನಿನ ನೀಲವರ್ಣ, ಗಿರಿ ಕಾನನದ ಹಸಿರು ವರ್ಣ — ಒಟ್ಟಾರೆ ಬಣ್ಣಗಳ ಸಂಗಮ. ತಮ್ಮನ್ನು ತಾವು ಯಾವುದೋ ಸಮ್ಮೇಳನದಲ್ಲಿ ತೊಡಗಿಸಿಕೊಂಡಂತೆ ಕಾಣುವ ಗಿರಿಗಳ ಸಾಲು ಕಲಾತ್ಮಕವಾಗಿಯೂ ಕಾವ್ಯಾತ್ಮಕವಾಗಿಯೂ ಚಾರಣಿಗರನ್ನು ಸೆಳೆದು ಪಾಠ ಹೇಳುತ್ತವೆ. ಆದರೆ ಕಾಣುವ, ಗ್ರಹಿಸುವ ಕಣ್ಣು ಮುಖ್ಯ ಪಾತ್ರವಾಗುತ್ತದೆ.

## ಕರುನಾಡ ದೇಶದೊಳ್...

ಕರ್ನಾಟಕದ ಮಡಿಕೇರಿಯ